# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 113 |
| ಸದಸ್ಯರ ಹೆಸರು | : | ಶ್ರೀ ಛಲವಾದಿ.ಟಿ.ನಾರಾಯಣಸ್ವಾಮಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಗೃಹಜ್ಯೋತಿ ಯೋಜನೆಯಡಿ ನೋಂದಣಿ ಮಾಡಿಕೊಂಡಿರುವ ವಿದ್ಯುತ್ ಬಳಕೆದಾರರ ಸಂಖ್ಯೆ ಎಷ್ಟು; ಈಯೋಜನೆಯಿಂದ ಹೊರಗುಳಿದವರ ಸಂಖ್ಯೆ ಎಷ್ಟು; (ಎಸ್ಕಾಂವಾರು ಸಂಪೂರ್ಣ ಮಾಹಿತಿ ನೀಡುವುದು) | ಗೃಹಜ್ಯೋತಿ ಯೋಜನೆಯಡಿ ನೋಂದಣಿ ಮಾಡಿಕೊಂಡಿರುವ ವಿದ್ಯುತ್ ಬಳಕೆದಾರರ ಸಂಖ್ಯೆ ಮತ್ತು ಈ ಯೋಜನೆಯಿಂದ ಹೊರಗುಳಿದವರ ಸಂಖ್ಯೆಗಳ ಎಸ್ಕಾಂವಾರು ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. |
| ಆ) | ಸದರಿ ಯೋಜನೆಯಲ್ಲಿ ನೋಂದಣಿ ಮಾಡಿಕೊಂಡಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ವ್ಯಾಪ್ತಿಗೆ ಒಳಪಡುವ ವಿದ್ಯುತ್ ಬಳಕೆದಾರರ ಸಂಖ್ಯೆ ಎಷ್ಟು; ಇಲ್ಲಿಯವರೆಗೆ ಅವರು ಬಳಕೆ ಮಾಡಿಕೊಂಡಿರುವ ವಿದ್ಯುತ್ ಪ್ರಮಾಣ ಮತ್ತು ಮೊತ್ತವೆಷ್ಟು; ಸದರಿ ಮೊತ್ತವು ಸರ್ಕಾರದಿಂದ ಪಾವತಿ ಆಗಿದೆಯೇ; | ಮಾಹಿತಿಯ ಬಗ್ಗೆ **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಇ) | ಸದರಿ ಯೋಜನೆಯಡಿ 2023-24 ಮತ್ತು 2024-25ನೇ ಸಾಲಿನಲ್ಲಿ ನೋಂದಾಯಿತ ವಿದ್ಯುತ್ ಬಳಕೆದಾರರು ಉಪಯೋಗಿಸಿದ ವಿದ್ಯುತ್ ಪ್ರಮಾಣವೆಷ್ಟು; ಹಾಗೂ ಎಷ್ಟು ಮೊತ್ತದ ವಿದ್ಯುತ್ ನ್ನು ಬಳಕೆ ಮಾಡಲಾಗಿದೆ; | ಗೃಹಜ್ಯೋತಿ ಯೋಜನೆಯಡಿ 2023-24 ಮತ್ತು 2024-25ನೇ ಸಾಲಿನಲ್ಲಿ ನೋಂದಾಯಿತ ವಿದ್ಯುತ್ ಬಳಕೆದಾರರು ಉಪಯೋಗಿಸಿದ ವಿದ್ಯುತ್ ಪ್ರಮಾಣ ಹಾಗೂ ಬಳಕೆ ಮಾಡಿದ ವಿದ್ಯುತ್ ಮೊತ್ತದ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ. |
| ಈ) | ಗೃಹಜ್ಯೋತಿ ಯೋಜನೆಯ ಫಲಾನುಭವಿಗಳು ಬಳಸಿದ ವಿದ್ಯುತ್ ಗೆ ಅನುಗುಣವಾಗಿ ಸರಿಯಾದ ಸಮಯದಲ್ಲಿ ಸರ್ಕಾರದಿಂದ ವಿದ್ಯುತ್ ಬಳಕೆಯ ಮೊತ್ತವು ಪಾವತಿಯಾಗುತ್ತಿದೆಯೇ; (ಪಾವತಿ ವಿವರ ನೀಡುವುದು); | ಗೃಹಜ್ಯೋತಿ ಯೋಜನೆಯ ಫಲಾನುಭವಿಗಳು ಬಳಸಿದ ವಿದ್ಯುತ್ತಿಗೆ ಅನುಗುಣವಾಗಿ ಸರಿಯಾದ ಸಮಯದಲ್ಲಿ ಸರ್ಕಾರದಿಂದ ವಿದ್ಯುತ್ ಬಳಕೆಯ ಮೊತ್ತವು ಪಾವತಿಯಾಗುತ್ತಿದ್ದು ವಿವರವನ್ನು **ಅನುಬಂಧ-4**ರಲ್ಲಿ ಒದಗಿಸಲಾಗಿದೆ. |
| ಉ) | ಗೃಹ ಜ್ಯೋತಿಯೋಜನೆಯಡಿ ಸರ್ಕಾರದಿಂದ ಪಾವತಿಯಾಗದೇ ಬಾಕಿ ಉಳಿಸಿಕೊಂಡಿರುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | |

ಸಂಖ್ಯೆ: ಎನರ್ಜಿ 177 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ.ಛಲವಾದಿ ಟಿ.ನಾರಾಯಣಸ್ವಾಮಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:113ಕ್ಕೆ ಅನುಬಂಧ-1

ರಾಜ್ಯದಲ್ಲಿ ಗೃಹಜ್ಯೋತಿ ಯೋಜನೆಯಡಿಯಲ್ಲಿ ನೋಂದಣಿ ಮಾಡಿಕೊಂಡಿರುವ ವಿದ್ಯುತ್ ಬಳಕೆದಾರರು ಹಾಗೂ ಈ ಯೋಜನೆಯಿಂದ ಹೊರಗುಳಿದವರ ಸಂಖ್ಯೆಗಳ ವಿವರಗಳು

| ವಿದ್ಯುತ್ ಸರಬರಾಜು ಕಂಪನಿಯ ಹೆಸರು | ಗೃಹ ಜ್ಯೋತಿ ಯೋಜನೆಯಡಿಯಲ್ಲಿ ನೋಂದಣಿ ಮಾಡಿಕೊಂಡಿರುವ ವಿದ್ಯುತ್ ಬಳಕೆದಾರರ ಸಂಖ್ಯೆ (ಜೂನ್-2024ರ ಅಂತ್ಯಕ್ಕೆ) | ಗೃಹಜ್ಯೋತಿ ಯೋಜನೆಯಿಂದ ಹೊರಗುಳಿದವರ ಸಂಖ್ಯೆ (ಜೂನ್-2024ರ ಅಂತ್ಯಕ್ಕೆ) |
|---|---|---|
| ಬೆಸ್ಕಾಂ | 7013678 | 2190395 |
| ಮೆಸ್ಕಾಂ | 1744327 | 347150 |
| ಸೆಸ್ಕ್ | 2393702 | 135250 |
| ಹೆಸ್ಕಾಂ | 3317039 | 348355 |
| ಜೆಸ್ಕಾಂ | 2173021 | 78561 |
| ಒಟ್ಟು | **16641767** | **3099711** |

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಛಲವಾದಿ.ಟಿ.ನಾರಾಯಣಸ್ವಾಮಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 113 ಕ್ಕೆ ಅನುಬಂಧ–2**

**ರಾಜ್ಯದಲ್ಲಿ "ಗೃಹ ಜ್ಯೋತಿ" ಯೋಜನೆಯಡಿಯಲ್ಲಿ ನೋಂದಣಿ ಮಾಡಿಕೊಂಡಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ವ್ಯಾಪ್ತಿಗೆ ಒಳಪಡುವ ವಿದ್ಯುತ್ ಬಳಕೆದಾರರ ವಿವರಗಳು**

"ಗೃಹ ಜ್ಯೋತಿ" ಯೋಜನೆಯನ್ನು ರಾಜ್ಯದಲ್ಲಿನ ಎಲ್ಲಾ ಪ್ರವರ್ಗದ ಗೃಹ ಬಳಕೆ ಗ್ರಾಹಕರ ಸೌಲಭ್ಯಕ್ಕಾಗಿ ಅನುಷ್ಠಾನಗೊಳಿಸಲಾಗಿರುತ್ತದೆ. ಈ ಯೋಜನೆಯ ಸೌಲಭ್ಯಕ್ಕಾಗಿ ನೊಂದಾಯಿಸುವ ಫಲಾನುಭವಿಗಳು ಸೇವಾ ಸಿಂಧು ತಂತ್ರಾಂಶದಲ್ಲಿ ನೊಂದಣಿ ಮಾಡಬೇಕಾಗಿದ್ದು, ಸದರಿ ನೊಂದಣಿ ಅರ್ಜಿಯಲ್ಲಿ ಮಾಹಿತಿಯನ್ನು ಸರಳೀಕರಣಗೊಳಿಸುವ ಸಲುವಾಗಿ ಪ್ರತ್ಯೇಕವಾಗಿ ಜಾತಿವಾರು ಮಾಹಿತಿಯ ಅಂಕಣ (Column) ನಮೂದಿಸಿರುವುದಿಲ್ಲ. ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯುವ ಸಂದರ್ಭದಲ್ಲಿಯೂ ಸಹ ಜಾತಿವಾರು ವಿವರಗಳ ಮಾಹಿತಿ ಸಂಗ್ರಹಿಸಲ್ಪಡದಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ನಿರ್ದಿಷ್ಟ ಅಂಕಿ–ಅಂಶಗಳು ಲಭ್ಯವಿರುವುದಿಲ್ಲ.

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ.ಛಲವಾದಿ ಟಿ.ನಾರಾಯಣಸ್ವಾಮಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:113ಕ್ಕೆ ಅನುಬಂಧ-3**

**2023-24 ಹಾಗೂ 2024-25ನೇ ಸಾಲಿನಲ್ಲಿ ಗೃಹಜ್ಯೋತಿ ಯೋಜನೆಯಡಿಯಲ್ಲಿ ನೋಂದಾಯಿತ ವಿದ್ಯುತ್ ಬಳಕೆದಾರರು ಬಳಕೆಮಾಡಿದ ವಿದ್ಯುತ್ ಪ್ರಮಾಣ ಮತ್ತು ಅದರ ಮೊತ್ತದ ವಿವರಗಳು**

| ವಿದ್ಯುತ್ ಸರಬರಾಜು ಕಂಪನಿಯ ಹೆಸರು | 2023-24ನೇ ಸಾಲಿನಲ್ಲಿ ಬಳಕೆಯಾದ ವಿದ್ಯುತ್ ಪ್ರಮಾಣ (ದಶ ಲಕ್ಷ ಯೂನಿಟ್‌ಗಳಲ್ಲಿ) | 2023-24ನೇ ಸಾಲಿನಲ್ಲಿ ಬಳಕೆಯಾದ ವಿದ್ಯುತ್ ಪ್ರಮಾಣದ ಮೊತ್ತ (ರೂ.ಕೋಟಿಗಳಲ್ಲಿ) | 2024-25ನೇ ಸಾಲಿನಲ್ಲಿ ಬಳಕೆಯಾದ ವಿದ್ಯುತ್ ಪ್ರಮಾಣ (ದಶ ಲಕ್ಷ ಯೂನಿಟ್‌ಗಳಲ್ಲಿ) (ಜೂನ್-2024ರ ಅಂತ್ಯಕ್ಕೆ) | 2024-25ನೇ ಸಾಲಿನಲ್ಲಿ ಬಳಕೆಯಾದ ವಿದ್ಯುತ್ ಪ್ರಮಾಣದ ಮೊತ್ತ (ರೂ.ಕೋಟಿಗಳಲ್ಲಿ) (ಜೂನ್-2024ರ ಅಂತ್ಯಕ್ಕೆ) |
|---|---|---|---|---|
| ಬೆಸ್ಕಾಂ | 2718.25 | 2633.83 | 1100.20 | 1048.54 |
| ಮೆಸ್ಕಾಂ | 852.81 | 631.25 | 453.25 | 254.55 |
| ಸೆಸ್ಕ್ | 693.69 | 615.92 | 295.12 | 272.51 |
| ಹೆಸ್ಕಾಂ | 973 | 994.37 | 414.67 | 416.69 |
| ಜೆಸ್ಕಾಂ | 716.14 | 678.74 | 295.16 | 311.95 |
| ಒಟ್ಟು | **5953.89** | **5554.11** | **2558.40** | **2304.24** |

| ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 113 ಕ್ಕೆ ಅನುಬಂಧ-4<br>ಗೃಹ ಜ್ಯೋತಿ ಯೋಜನೆಯಡಿಯಲ್ಲಿ ಬಳಕೆಯಾದ ವಿದ್ಯುತ್ ಪ್ರಮಾಣಕ್ಕೆ ಸಂಬಂಧಿಸಿದಂತೆ ಸರ್ಕಾರ ಪಾವತಿಸಿದ ಮೊತ್ತ ಹಾಗೂ ಪಾವತಿಸಲು ಬಾಕಿ ಇರುವ ಮೊತ್ತದ<br>ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳು | | |
|---|---|---|
| ವಿದ್ಯುತ್ ಸರಬರಾಜು ಕಂಪನಿಯ ಹೆಸರು | ಸರ್ಕಾರ ಪಾವತಿ ಮಾಡಿದ ಮೊತ್ತ (2023-24 ರಿಂದ 2024-25 ನೇ ಸಾಲಿನ ಜೂನ್-2024 ಅಂತ್ಯಕ್ಕೆ) (ರೂ. ಕೋಟಿಗಳಲ್ಲಿ ) | ಸರ್ಕಾರ ಪಾವತಿ ಮಾಡಬೇಕಾದ ಬಾಕಿ ಮೊತ್ತ (ಜೂನ್ -2024 ರ ಅಂತ್ಯಕ್ಕೆ) (ರೂ.ಕೋಟಿಗಳಲ್ಲಿ ) |
| ಬೆಸ್ಕಾಂ | 3883.00 | ಬಾಕಿ ಮೊತ್ತ ಯಾವುದೂ ಇರುವುದಿಲ್ಲ. |
| ಮೆಸ್ಕಾಂ | 897.00 | |
| ಸೆಸ್ಕ್ | 888.00 | |
| ಹೆಸ್ಕಾಂ | 1546.00 | |
| ಜೆಸ್ಕಾಂ | 993.00 | |
| ಹುಕ್ಕೇರಿ | 33.00 | |
| **ಒಟ್ಟು** | **8240.00** | |